ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ:ಸಿ7(8)ಆರ್.ಟಿ.ಇ ಪ್ರ.ಪ್ರ /18-19/2017-18 ದಿನಾಂಕ:20.02.2018

**: : ಸುತ್ತೋಲೆ : :**

ವಿಷಯ:- 2018-19 ನೇ ಸಾಲಿನಲ್ಲಿ ಅನುದಾನಿತ ಶಾಲೆಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 12(1)(ಬಿ) ಅಡಿ ಪ್ರವೇಶ ಪ್ರಕ್ರಿಯೆ ಬಗ್ಗೆ.

ಉಲ್ಲೇಖ:- 1. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ-2009.
2. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು-2012.
3. ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ:16-12-2017.
4. ಸರ್ಕಾರದ ಆದೇಶ ಸಂಖ್ಯೆ: ಇಡಿ 36 ಪಿಜಿಸಿ 2018 ದಿನಾಂಕ:23-1-2018.
5. ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ:27-01-2018.

********

ಸರ್ಕಾರದ ಆದೇಶ ಸಂಖ್ಯೆ:ಇಡಿ 36 ಪಿಜಿಸಿ 2018 ದಿನಾಂಕ:23-1-2018 ರಲ್ಲಿ 2018-19ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 12(1)(ಬಿ)ಅಡಿ ಅನುದಾನಿತ ಖಾಸಗಿ ಶಾಲೆಗಳಲ್ಲೂ ಸಹ ಅನಾನೂಕೂಲ ಪರಿಸ್ಥಿತಿಯಲ್ಲಿರುವ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ಪ್ರವೇಶ ನೀಡಲು ಆದೇಶಿಸಲಾಗಿದೆ. ಅದರಂತೆ ಶಾಲಾವಾರು ಸೀಟು ಹಂಚಿಕೆ ಮತ್ತು ಪ್ರವೇಶ ಪ್ರಕ್ರಿಯೆಯನ್ನು ತಂತ್ರಾಂಶದ ಮೂಲಕ ನಿರ್ವಹಿಸಲಾಗುವುದು. ಈ ಬಗ್ಗೆ ತಂತ್ರಾಂಶವನ್ನು ಶಾಲಾ ಮುಖ್ಯಸ್ಥರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಶಾಲಾವಾರು ಮೀಸಲಿಡಬೇಕಾದ ಸೀಟುಗಳ ಸಂಖ್ಯೆಯನ್ನು ನಿಗಧಿಪಡಿಸಿ ತಂತ್ರಾಂಶದಲ್ಲಿ ಪ್ರಕಟಿಸಲು ಈ ಕೆಳಕಾಣಿಸಿದ ಕ್ರಮತೆಗೆದುಕೊಳ್ಳಲು ತಿಳಿಸಿದೆ.

**ಶಾಲಾ ಹಂತದಲ್ಲಿ :**

- ಶಾಲಾ ಮುಖ್ಯಸ್ಥರು ಶಾಲೆಯಲ್ಲಿರುವ ಮಾಧ್ಯಮವಾರು, ಅನುದಾನಿತ ಮತ್ತು ಅನುದಾನರಹಿತ ವಿಭಾಗವಾರು, ಪ್ರತ್ಯೇಕವಾಗಿ, ಮಕ್ಕಳ ಮಾಹಿತಿ, ಆಡಿಟ್ ವರದಿ ಪ್ರಕಾರ ಆವರ್ತಕ ವೆಚ್ಚದ ಒಟ್ಟು ಮೊತ್ತವನ್ನು ತಂತ್ರಾಂಶದಲ್ಲಿ ನಿಖರವಾಗಿ ನಮೂದಿಸುವುದು.
- ಮಾಧ್ಯಮವಾರು ಪ್ರತ್ಯೇಕ ಡೈಸ್‌ಕೋಡ್ ಈಗಾಗಲೇ ಹೊಂದಿದ್ದು, ಅನುದಾನರಹಿತ ಡೈಸ್‌ಕೋಡ್ ಸಂಖ್ಯೆಯ ಶಾಲೆಯಲ್ಲಿ ಕಾಯಿದೆಯ ಸೆಕ್ಷನ್ 12(1)(ಸಿ) ಅಡಿ ಈಗಾಗಲೇ ಪ್ರವೇಶ ಪ್ರಕ್ರಿಯೆ ಪ್ರಾರಂಭಿಸಿ ಶುಲ್ಕ ಮರುಪಾವತಿ ಪಡೆಯುತ್ತಿದ್ದರೆ, ಅಂತಹ ಶಾಲೆಯ ಮಾಹಿತಿಯನ್ನು ಈ ತಂತ್ರಾಂಶದಲ್ಲಿ ಸೇರಿಸಬಾರದು. ಆದರೆ ಒಂದೇ ಡೈಸ್‌ಕೋಡ್ ಸಂಖ್ಯೆಯಲ್ಲಿ ಅನುದಾನಿತ ವಿಭಾಗ ಹಾಗೂ ಅನುದಾನರಹಿತ ಹೆಚ್ಚುವರಿ ವಿಭಾಗ ಇದ್ದಲ್ಲಿ ಅಂತಹ ಶಾಲೆಗಳಲ್ಲಿ 2015-16 ಅಥವಾ 2016-17 ನೇ ಸಾಲಿನ ಆಡಿಟ್ ವರದಿಯನ್ನು ಅನುದಾನಿತ ಶಾಲೆಗೆ ಮತ್ತು ಅನುದಾನರಹಿತ ಶಾಲೆಗೆ ಪ್ರತ್ಯೇಕವಾಗಿ ಪರಿಗಣಿಸಿ ತಂತ್ರಾಂಶದಲ್ಲಿ ನೀಡಿರುವ ನಿರ್ಧಿಷ್ಟ ಕಾಲಂನಲ್ಲಿ ವೆಚ್ಚದ ವಿವರವನ್ನು ನಮೂದಿಸುವುದು. ಒಂದು ವೇಳೆ ಪ್ರತ್ಯೇಕ ಆಡಿಟ್ ವರದಿ ಲಭ್ಯವಿಲ್ಲದಿದ್ದಲ್ಲಿ ಅನುದಾನಿತ ಮತ್ತು ಅನುದಾನರಹಿತ ಎರಡು ವಿಭಾಗಗಳ ಆವರ್ತಕ ವೆಚ್ಚದ ಒಟ್ಟು ಮೊತ್ತವನ್ನು ಸಂಬಂಧಿಸಿದ ಬಾಬ್ತುಗಳ ಮುಂದೆ ನಮೂದಿಸುವುದು.
- ಶಾಲೆಯಲ್ಲಿ 1 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ತರಗತಿವಾರು ಮಕ್ಕಳ ಸಂಖ್ಯೆ ಮತ್ತು ಒಟ್ಟು ಮಕ್ಕಳ ಸಂಖ್ಯೆಯನ್ನು 30-9-2017ರ ಯು-ಡೈಸ್‌ನಲ್ಲಿ ಇದ್ದಂತೆ ನಮೂದಿಸುವುದು. 2016-17ನೇ ಆರ್ಥಿಕ ವರ್ಷದಲ್ಲಿ ಸರ್ಕಾರದಿಂದ ಪಡೆದಿರುವ ವೇತನಾನುದಾನ ಹಾಗೂ ಇತರೆ ಅನುದಾನಗಳ ಮೊತ್ತವನ್ನು ಶಾಲಾ ಮುಖ್ಯಸ್ಥರು ತಂತ್ರಾಂಶದಲ್ಲಿ ನಮೂದಿಸುವುದು.
- ಆಡಿಟ್ ವರದಿಯಲ್ಲಿ ಆಸ್ತಿ ಮತ್ತು ಋಣ ತಖ್ತೆ ಹಾಗೂ ಜಮಾ ಖರ್ಚಿನ ಪುಟಗಳನ್ನು ದೃಢೀಕರಿಸಿ ಶಾಲೆಯ ಹೆಸರು ಸ್ಪಷ್ಟವಾಗಿ ಕಾಣುವಂತೆ ನಮೂದಿಸಿ ತಂತ್ರಾಂಶದಲ್ಲಿ ಅಪ್‌ಡೇಟ್ ಮಾಡುವುದು.

**ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ :**

- ದಿನಾಂಕ: 07.02.2018 ರ ಈ ಕಾರ್ಯಾಲಯದ ಸುತ್ತೋಲೆಯನ್ನು ಸಂಬಂಧಿಸಿದ ಎಲ್ಲಾ ಅನುದಾನಿತ ಶಾಲೆಗಳಿಗೆ ತಲುಪಿಸುವುದು.
- ಕ್ಷೇತ್ರ ಶಿಕ್ಷಣಾಧಿಕಾರಿಗಳು ಅವರ ವ್ಯಾಪ್ತಿಯಲ್ಲಿರುವ ಎಲ್ಲಾ ಅನುದಾನಿತ ಶಾಲೆಗಳ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಶಾಲಾವಾರು 30-9-2017 ರ ಯು-ಡೈಸ್‌ನಲ್ಲಿ ಇದ್ದಂತೆ 1ನೇ ತರಗತಿಯ ವಿದ್ಯಾರ್ಥಿಗಳ ನಿಖರವಾದ ಸಂಖ್ಯೆಯನ್ನು ಪರಿಶೀಲಿಸಿ ಸದರಿ ಶಾಲೆಯಲ್ಲಿ 1 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಒಟ್ಟು ಮಕ್ಕಳ ಸಂಖ್ಯೆಯನ್ನು, ಶಾಲೆ ನೀಡಿರುವ ಸಂಖ್ಯೆಗೆ ತಾಳೆ ನೋಡಿ ಖಾತರಿಪಡಿಸಿಕೊಳ್ಳುವುದು.
- ಅನುದಾನಿತ ಮತ್ತು ಅನುದಾನರಹಿತ ಮಾಧ್ಯಮವಾರು ವಿಭಾಗಗಳು ಒಂದೇ ಡೈಸ್‌ಕೋಡ್ ಸಂಖ್ಯೆಯಲ್ಲಿ ಒಂದೇ ಆಡಳಿತ ಮಂಡಳಿಯ ಒಂದೇ ಶಾಲೆಯಲ್ಲಿ ಅನುದಾನಿತ ಮತ್ತು ಅನುದಾನರಹಿತ ಕನ್ನಡ ಮತ್ತು ಆಂಗ್ಲ ಮಾಧ್ಯಮ ಅಥವಾ ಇತರೆ ಮಾಧ್ಯಮದ ಪ್ರತ್ಯೇಕ ವಿಭಾಗಗಳಿದ್ದಲ್ಲಿ, ಅನುದಾನಿತ ಮತ್ತು ಅನುದಾನರಹಿತ ವಿಭಾಗಗಳ ಪ್ರತ್ಯೇಕ ಆಡಿಟ್ ವರದಿಯನ್ನು ಶಾಲೆಗಳಿಂದ ಪಡೆದು ಶುಲ್ಕ ಮರುಪಾವತಿಗೆ ತಂತ್ರಾಂಶದಲ್ಲಿ ಪರಿಗಣಿಸಲಾಗಿರುವ ಬಾಬ್ತುವಾರು ಆವರ್ತಕ ವೆಚ್ಚದ ಮೊತ್ತವನ್ನು ಶಾಲೆ ನಮೂದಿಸಿರುವ ಮೊತ್ತಕ್ಕೆ ತಾಳೆ ನೋಡಿ ಖಾತರಿ ಪಡಿಸಿಕೊಂಡು ತಂತ್ರಾಂಶದಲ್ಲಿ ಅನುಮೋದಿಸುವುದು. (ಶಿಕ್ಷಕರ ವೇತನ, ಲಿಪಿಕ ನೌಕರರ ವೇತನ, ಇತರೆ ವೆಚ್ಚದ ಕಾಲಂನಲ್ಲಿ ನಮೂದಿಸಿರುವ ಮೊತ್ತ)
- ಪ್ರತಿ ಶಾಲೆಗೆ 2016-17ನೇ ಆರ್ಥಿಕ ವರ್ಷದಲ್ಲಿ ನೀಡಿರುವ ವೇತನಾನುದಾನ ಹಾಗೂ ಇತರೆ ಅನುದಾನಗಳ ಒಟ್ಟು ಮೊತ್ತವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ನಿರ್ವಹಿಸಿರುವ ದಾಖಲೆಗಳೊಂದಿಗೆ ತಾಳೆ ನೋಡಿ ಖಾತರಿಪಡಿಸಿಕೊಂಡು, ಅನುಮೋದಿಸುವುದು.
- ಎಲ್ಲಾ ಅನುದಾನಿತ ಪ್ರಾಥಮಿಕ ಶಾಲೆಗಳ ಸಂಬಂಧಿಸಿದ ( authorised) ವ್ಯಕ್ತಿಯ ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸವನ್ನು ಸಂಗ್ರಹಿಸಿ, ಉಪನಿರ್ದೇಶಕರು(ಆಡಳಿತ) ಇವರ ಮೂಲಕ ಕಳುಹಿಸಿಕೊಡುವುದು.

ಸರ್ಕಾರದ ಆದೇಶ ಸಂಖ್ಯೆ:ಇಡಿ 36 ಪಿಜಿಸಿ 2018. ದಿನಾಂಕ:23-1-2018ರ ಆದೇಶದಲ್ಲಿ ಆದೇಶಿಸಿರುವಂತೆ 2018-19ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 12(1)(ಬಿ) ಅಡಿ ಪ್ರವೇಶ ಪ್ರಕ್ರಿಯೆಯನ್ನು ಕಾಯಿದೆಯ ಸೆಕ್ಷನ್ 12(1)(ಸಿ) ಅಡಿ ತಂತ್ರಾಂಶದ ಮೂಲಕ ನಡೆಸುವ ಪ್ರಕ್ರಿಯೆಯಂತೆಯೇ ನಡೆಸಲಾಗುವುದು. ಆದ ಕಾರಣ ನೆರೆಹೊರೆಯಲ್ಲಿನ ಎಲ್ಲಾ ಅನುದಾನಿತ ಶಾಲೆಗಳ ಜೊತೆಗೆ ಅನುದಾನ ರಹಿತ ಶಾಲೆಗಳನ್ನು ಸಹ ಮ್ಯಾಪ್ ಮಾಡುವುದು. ಶಾಲಾವಾರು 1ನೇ ತರಗತಿಗೆ ಮೀಸಲಿಡಬೇಕಾದ ಶಾಲಾವಾರು ಸೀಟುಗಳ ಸಂಖ್ಯೆಯನ್ನು ತಂತ್ರಾಂಶದ ಮೂಲಕ ಲೆಕ್ಕಾಚಾರ ಮಾಡಿ ನಿಗಧಿಪಡಿಸಲಾಗುವುದು. ಅನುದಾನಿತ ಶಾಲೆಗಳಲ್ಲಿ ಉಚಿತ ಸೀಟುಗಳ ಶೇಕಡ ಸಂಖ್ಯೆಯನ್ನು ಸದರಿ ಶಾಲೆ ಸರ್ಕಾರದಿಂದ ಪಡೆದ ಒಟ್ಟು ಅನುದಾನದ ಮೊತ್ತವನ್ನು ಸದರಿ ಶಾಲೆ ಸದರಿ ಆರ್ಥಿಕ ವರ್ಷದಲ್ಲಿ ಮಾಡಿರುವ ಆವರ್ತಕ ವೆಚ್ಚದ ಮೊತ್ತದಿಂದ ಭಾಗಿಸಿ ಬಂದ ಭಾಗಲಬ್ದದ ಸಂಖ್ಯೆಯನ್ನು 100 ರಿಂದ ಗುಣಿಸಿ ಲೆಕ್ಕಾಚಾರ ಮಾಡಲಾಗುವುದು. ಅಂದರೆ ಅನುದಾನಿತ ಶಾಲೆ ಸರ್ಕಾರದಿಂದ ಪಡೆದ ಅನುದಾನದ ಅನುಪಾತಕ್ಕೆ ಅನುಗುಣವಾಗಿ ಕಾಯಿದೆಯ ಸೆಕ್ಷನ್ 12(1)(ಬಿ)ಅಡಿ ಮೀಸಲಿಡಬೇಕಾದ ಸೀಟುಗಳ ಸಂಖ್ಯೆಯನ್ನು ನಿಗಧಿಪಡಿಸಲಾಗಿವುದು.

ಶಾಲಾ ಮುಖ್ಯಸ್ಥರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಸರ್ಕಾರದ ಆದೇಶ ಮತ್ತು ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳನ್ನು ಕಾಲಮಿತಿಯೊಳಗೆ ಕಟ್ಟುನಿಟ್ಟಾಗಿ ಪಾಲಿಸತಕ್ಕದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ರವರಿಗೆ,

(1) ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ.

(2) ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರು(ಆಡಳಿತ) ಇವರ ಮುಖಾಂತರ ಸೂಕ್ತ ಕ್ರಮಕ್ಕಾಗಿ.

(3) ಕಛೇರಿ ಪ್ರತಿ.